## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ. 2126/2021

ದಿನಾಂಕ ಃ 22.07.2026

| | | |
|---|---|---|
| ಹೆಸರು | ತಿಪ್ಪೇಸ್ವಾಮಿ.ಜೆ.ಎಸ್. | ಸಿಡಬ್ಲ್ಯೂ– 27 |
| ತಂದೆ ಹೆಸರು | ಸಣ್ಣ ನುಂಕಪ್ಪ | ಪಿ ಡಬ್ಲ್ಯೂ– 11 |
| ವಯಸ್ಸು | 55 ವರ್ಷ | |
| ಉದ್ಯೋಗ | ಡಿ.ವೈ.ಎಸ್.ಪಿ. | |
| ವಾಸಸ್ಥಳ | ಚಿಕ್ಕಮಗಳೂರು | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆ ಃ ಮಾನ್ಯ ಎ.ಪಿ.ಪಿ. ರವರಿಂದಃ

ದಿಃ19.01.2020 ರಿಂದ ಜುಲೈ 2022 ರವರೆಗೆ ನಾನು ಚಳ್ಳಕೆರೆ ಠಾಣೆಗಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19.01.2021 ರಂದು ಪ್ರಕರಣದ ಕಡತವನ್ನು ಚಾಸಾ–26 ರವರಿಂದ ಪಡೆದುಕೊಂಡು ಮುಂದಿನ ತನಿಖೆ ಕೈಗೊಂಡಿರುತ್ತೇನೆ. ದಿನಾಂಕಃ 23.04.2021 ರಂದು ಆರೋಪಿಯು ಠಾಣೆಗೆ ಹಾಜರಾದ ಮೇರೆಗೆ ಆತನನ್ನು ವಿಚಾರಣೆ ಮಾಡಿ ಆತನ ವಿರುದ್ಧ ದಸ್ತಗಿರಿ ನಿಯಮ ಪಾಲಿಸಿ ಆತನನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿಯು ತನ್ನ ಬಾಬ್ತು ಬೈಕ್ ಅನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಹಾಗೂ ಬೈಕ್ ಗೆ ವಿಮೆ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ಕೆಎ 16 ಇಸಿ 8182 ಬೈಕ್ ಅನ್ನು ಮಾಲು ಪಟ್ಟಿ ಸಂಖ್ಯೆ 106/2021 ರಂತೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕಃ 06–05–2021 ರಂದು ಆರೋಪಿಯು ಮಾನ್ಯ ನ್ಯಾಯಾಲಯದ ಆದೇಶವನ್ನು ಹಾಜರುಪಡಿಸಿದ ಮೇರೆಗೆ ನ್ಯಾಯಾಲಯದ ಆದೇಶದ ಮೇರೆಗೆ ಚಾಸಾ–12 ಮತ್ತು 13 ರ ಸಮಕ್ಷಮ ಸಂಜೆ 5–00 ರಿಂದ 5–45 ರವರೆಗೆ ಬಿಡುಗಡೆ ಪಂಚನಾಮೆ ಜರುಗಿಸಿ ಬಾವಚಿತ್ರವನ್ನು ತೆಗೆಸಿ ವಾಹನದ ಮಾಲಿಕರಾದ ಆರೋಪಿಯ ವಶಕ್ಕೆ ಬೈಕ್ ಅನ್ನು ನೀಡಲಾಗಿರುತ್ತದೆ. ಸಾಕ್ಷಿಗೆ ನಿಪಿ.11 ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಸಾಕ್ಷಿಯ ಸಹಿಯನ್ನು ನಿಪಿ.11(ಎ) ಅಂತ ಗುರುತಿಸಲಾಯಿತು. ಸಾಕ್ಷಿಗೆ 2 ಬಾವಚಿತ್ರಗಳನ್ನು ತೋರಿಸಲಾಗಿ ಸದರಿ ಬಾವಚಿತ್ರಗಳನ್ನು ಬಿಡುಗಡೆ ಪಂಚನಾಮೆ ಸಮಯದಲ್ಲಿ ತೆಗೆಯಲಾಗಿರುತ್ತದೆ ಎಂದು ನೋಡಿ ಗುರುತಿಸಿದ ಮೇರೆಗೆ ಸದರಿ ಬಾವಚಿತ್ರಗಳನ್ನು ಕ್ರಮವಾಗಿ ನಿಪಿ–18 ಮತ್ತು 19 ಎಂದು ಗುರುತಿಸಲಾಯಿತು.

ದಿನಾಂಕಃ 23.04.2021 ರಂದು ಆರೋಪಿಯು ಠಾಣೆಗೆ ಹಾಜರಾಗಿದ್ದಾಗ ಐ ಎಂ ವಿ ಕಲಂ 133 ರಡಿಯಲ್ಲಿ ನೋಟೀಸ್ ಜಾರಿ ಮಾಡಿ ಉತ್ತರವನ್ನು ಪಡೆದು ಪಡದಿರುತ್ತೇನೆ. ಸಾಕ್ಷಿಗೆ ನಿಪಿ.9 ಮತ್ತು 10

ದಾಖಲೆಗಳಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ, ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ.9(ಎ), 10(ಎ) ಅಂತ ಗುರುತಿಸಲಾಯಿತು.

ದಿನಾಂಕ 07.05.2021 ರಂದು ತನಿಖೆ ಪೂರ್ಣ ಗೊಂಡಿದ್ದರಿಂದ ಆರೋಪಿಯ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರತಿಸುವುದಾಗಿ ನುಡಿಯುತ್ತಾರೆ.

(ಆರೋಪಿಯು ಈ ದಿನ ಗೈರು ಹಾಜರಿದ್ದು ವಿನಾಯತಿಯ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ ಆರೋಪಿಯ ಪರ ವಕೀಲರು ಆರೋಪಿಯ ಗುರುತಿಸುವುಕೆಗೆ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. )

**ಪಾಟೀ ಸವಾಲುಃ ಶ್ರೀ ಸಿ.ವಿ., ಆರೋಪಿ ಪರ ವಕೀಲರಿಂದಃ**

ದಿನಾಂಕಃ 23.04.2021 ರಂದು ಆರೋಪಿಯು ಠಾಣೆಗೆ ಹಾಜರಾಗಿದಾಗ ಆತನ ವಿರುದ್ಧ ದಸ್ತಗಿರಿ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತನು ಚಾಲನ ಪರವಾನಿಗೆ ಹಾಗೂ ಬೈಕ್ ಗೆ ವಿಮೆ ಇರುವುದಿಲ್ಲ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ಬೈಕ್ ಅನ್ನು ಮಾಲುಪಟ್ಟಿಗೆ ಅಳವಡಿಸಿರುವುದು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ದೋಷರೋಪಣ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿಯಿದೆ,

ಪದಾನ ಸಿವಿಲ್ ಮತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ